ಕ್ರ.ಸಂ.33

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ(ಶಾಸಕರು) ಇವರು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ

**ಶೂನ್ಯ ವೇಳೆ ಪ್ರಸ್ತಾವನೆ:-**

ಮಾನ್ಯ ಸಭಾಪತಿಗಳೆ ಸುದ್ದಿ ಮೂಲಪತ್ರಿಕೆಯಲ್ಲಿ ಪಶು ಮಂತ್ರಿ ತವರಲ್ಲಿ ಗೋಶಾಲೆ ಅಧೋಗತಿ, ಹೋನ್ನಿಕೇರಿ ಸಿದ್ದೇಶ್ವರ ದೇವಸ್ಥಾನದಲ್ಲಿ ಜಾನುವಾರುಗಳ ಮೂಕರೋಧನೆ ಎಂಬ ಶೀರ್ಷಿಕೆಯಲ್ಲಿ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾದ ಗೋಹತ್ಯ ಕಾಯ್ದೆ ನಿಷೇದ ಹಾಗೂ ಗೋಶಾಲೆಗಳನ್ನು ಶೃಯಸ್ಸನ್ ಹೇಳುತ್ತಿದೆ. ಆದರೆ ಪಶುಸಂಗೋಪನಾ ಸಚಿವರ ತವರು ಜಿಲ್ಲೆಯಲ್ಲಿ ಹಸುಗಳ ಮೂಕರೋಧನೆ ಜರುತ್ತಿದೆ. ಬೇಡಿದವರ ನೀಡಿಡಿದ ಸಿದ್ದೇಶ್ವರನಿಗೆ ಹರಕೆ ತೀರಿಸಲು ದೇವಾಲಯ ಬಳಿಯೇ ನೈವೇದ್ಯ ತಯಾರಿಸಿ ದೇವರಿಗೆ ಸಲ್ಲಿಸುವುದು ಮತ್ತು ಹಸುಗಳನ್ನು ಘೂಳಿ ಹಸುವನ್ನು ದೇವಸ್ಥಾನಕ್ಕೆ(ಗೋಶಾಲೆಗೆ) ಬಿಟುವುದು ರೂಢಿಯಲ್ಲಿದೆ. ಇಲ್ಲಿ ಹಸುಗಳಿಗೆ ಉತ್ತಮ ಮೇವು ನೀಡದ ಕಾರಣ ಹಸು ಹಸುಕರುಗಳು ನರಳಿ ಸಾಯುತ್ತಿವೆ ಅವುಗಳನ್ನು ಪೆಟ್ರೋಲ್ ಹಾಕಿ ಸುಡುತ್ತಾರೆಂದು ಅಲ್ಲಿಯ ಸ್ಥಳೀಯರು ಗಂಭೀರ ಆರೋಪ ಮಾಡುತ್ತಿದ್ದಾರೆ. ನೂರರ ಆಸುಪಾಸಿನಲ್ಲಿ ಹಸುಗಳಿವೆ. ತಿನ್ನಲು ಬೈಕ್ಮೇಲೆ ನಾಲ್ಕು ಹಿಡಿ ಮೇವು ತಂದು ತಮ್ಮ ಕೆಲಸ ಮುಗಿತು ಎನ್ನುತ್ತಾರೆ ಗೋರಕ್ಷಕರು. ಇದರಿಂದ ಮೇಲಿಂದ ಮೇಲೆ ಜಾನುವಾರುಗಳ – ಸಾವಿನ ಸಂಖ್ಯೆ ಏರಿಕೆಯಾಗುತ್ತಿದೆ. ಹಸುಗಳ ಜೊತೆ ಫೋಟೋ ಕ್ಲಿಕ್ಕಿಸಿಕೊಂಡರೆ ಜಾನುವಾರುಗಳ ಬದುಕು ಉದ್ಧಾರವಾದ ಹಾಗೆ ಎನ್ನುವ ಖಯಾಲಿಯಲ್ಲಿದ್ದಾರೆ ಪಶುಸಂಗೋಪನಾ ಸಚಿವರು.

ಗೋಶಾಲೆಗಳು ಹಣ ಮಾಡುವ ಕಾರ್ಖಾನೆಗಳಾಗಿವೆ ಎಂಬುದು ಈಗ ಜಗಜ್ಜಾಹೀರಾಗಿದೆ. ಪ್ರಬಲ ಕಾನೂನು ತಂದರಷ್ಟೇ ಸಾಲದು. ಇದ್ದ ಜಾನುವಾರುಗಳ ರಕ್ಷಣೆಯೂ ಮುಖ್ಯವಾಗುತ್ತದೆ. ಹೊನ್ನಿಕೇರಿ ಸಿದ್ದೇಶ್ವರ ದೇವಾಲಯಕ್ಕೆ ಹೋಗಿ ಅಲ್ಲಿನ ಹಸುಗಳ ದರ್ಶನ ಮಾಡಿದರೆ ಸಾಕು! ಜಾನುವಾರುಗಳ ಆರೋಗ್ಯ ಸ್ಥಿತಿ ಎಲ್ಲರಿಗೂ ಗೊತ್ತಾಗುತ್ತದೆ. ಖುದ್ದು ಸಚಿವರು ಹಲವುಬಾರಿ ಅಲ್ಲಿನ ಗೋಶಾಲೆಗೆ ಭೇಟಿ ನೀಡಿದ್ದಾರೆ. ಆದರೆ ಬದಲಾವಣೆ ಮಾತ್ರ ಶೂನ್ಯ ಎನ್ನುತ್ತಿದ್ದಾರೆ ಸ್ಥಳೀಯರು.

ಪಶುಸಚಿವರಾಗಿ ಇಡೀ ರಾಜ್ಯ ಹೋಗಲಿ ಜಿಲ್ಲೆಯಲ್ಲಾದರೂ ಮಾದರಿ ಗೋಶಾಲೆ ನಿರ್ಮಿಸಬಾರದೇ? ಕನಿಷ್ಠ ಆಹಾರ, ನೀರಿಲ್ಲದೆ ಜಾನುವಾರುಗಳು ಸಾಯುತ್ತಿದ್ದರೂ ಆಡಳಿತದವರು ಕಣ್ಣು ಬಿಡುತ್ತಿಲ್ಲ. ಆದ್ದರಿಂದ ಸರ್ಕಾರ ಈ ಕುರಿತು ಗಂಭೀರವಾಗಿ ಪರಿಶೀಲಿಸಿ ಜಾನುವಾರುಗಳ ರಕ್ಷಣೆಗೆ ಬರಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಹೇಳಿಕೆ:-**

ಬೀದರ ಜಿಲ್ಲೆ, ಬೀದರ ತಾಲ್ಲೂಕು ಹೊನ್ನಿಕೆರೆ ಸಿದ್ದೇಶ್ವರ ದೇವಸ್ಥಾನದ ಗೋಶಾಲೆಯಲ್ಲಿ 106 ಜಾನುವಾರುಗಳಿದ್ದು, ಪ್ರಸ್ತುತ ಇದು ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ದೇವಸ್ಥಾನದ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ ಎಂದು ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೀದರ ರವರಿಂದ ವರದಿ ಪಡೆಯಲಾಗಿದೆ.

ಸದರಿ ಗೋಶಾಲೆಯ ನಿರ್ವಹಣೆಗೆ ದೇವಸ್ಥಾನದ ವತಿಯಿಂದ ಮೇವನ್ನು ಖರೀದಿ ಮಾಡಿ ಜಾನುವಾರುಗಳನ್ನು ಪೋಷಿಸಿರುತ್ತಾರೆ. ಸದರಿ ಗೋಶಾಲೆಯಿಂದ ಇದುವರೆಗೂ ಜಾನುವಾರು ನಿರ್ವಹಣೆ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ. ಆದಾಗಿಯೂ ಸದರಿ ಗೋಶಾಲೆ ರವರು ಪುಣ್ಯಕೋಟಿ ಯೋಜನೆಯಡಿ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ಜಾನುವಾರಿಗೆ ರೂ.11,000 ರಂತೆ ಅವುಗಳನ್ನು ದತ್ತು ಪಡೆದು ನಿರ್ವಹಣೆಗೆ ಅನುದಾನ ಬಿಡುಗಡೆಗೊಳಿಸಲಾಗುವುದು.

ಇ-ಪಸಂಮೀ 69 ಸಲೆವಿ 2023

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು